# ವಿಷ್ಣು ಎತ್ತಿ ಮುದ್ದಾಡಿದ ಕೂಸು

**ಕೌಶಿಕ್**
ಸ್ಟಾರ್ ಸುವರ್ಣದ 'ರೇಣುಕಾ ಯಲ್ಲಮ್ಮ' ಪರಶುರಾಮ

■ ರಾಘವೇಂದ್ರ ಕೆ.

◆ **ರಂಗಭೂಮಿಯ ಒಲವು ಮೂಡಿದ್ದು ಹೇಗೆ?**

ಪದವಿ ಓದುವಾಗಲೇ ನಾಟಕ ಚಟುವಟಿಕೆಯಲ್ಲಿ ತೊಡಗಿದ್ದೆ. ಆನಂತರ ರಂಗಭೂಮಿ, ಕಿರುತೆರೆಯಲ್ಲಿ ಕೆಲಸ ಮಾಡಿದೆ. ಸಿನಿಮಾದಲ್ಲಿ ಶಾರ್ಟ್ ಟರ್ಮ್ ಡಿಪ್ಲೊಮಾ ಮಾಡಿದೆ. ಆಗ ರಂಗಭೂಮಿ ನನ್ನ ವೃತ್ತಿಗೆ ಇನ್ನೂ ಹೆಚ್ಚಿನ ಸಹಕಾರ ನೀಡಬಹುದು ಎಂದೆನಿಸಿತು. ಹಿರಿಯರ ಸಹಾಯದಿಂದ ರಂಗ ಚಟುವಟಿಕೆಯನ್ನು ಮೂರು ವರ್ಷ ಮಾಡಿದೆ. ಅದರಲ್ಲಿ '3 ರೋಸಸ್' ಎಂಬ ನಾಟಕವನ್ನು ರಾಜ್ಯದಾದ್ಯಂತ ಪ್ರದರ್ಶನ ಮಾಡಲು ಸಾಧ್ಯ ಆಯಿತು. ಅದರಲ್ಲಿ ಯಾವುದೋ ಪುಟ್ಟ ಪಾತ್ರದ ನಿರೀಕ್ಷೆಯಲ್ಲಿದ್ದೆ. ಪ್ರಧಾನ ಪಾತ್ರ ಸಿಕ್ಕಿದ್ದು ಆತ್ಮವಿಶ್ವಾಸ ಹೆಚ್ಚಿಸಿತು. ರಂಗೋತ್ಸವಗಳಲ್ಲಿಯೂ ಆ ನಾಟಕಕ್ಕೆ ಬಹುಮಾನ ಬಂದಿದೆ. ಈಗಂತೂ ಅಂದಿನ ರಂಗ ಅಭ್ಯಾಸವೇ ನನ್ನ ಕೆಲಸವನ್ನು ತುಂಬ ಹಗುರ ಮಾಡಿದೆ. ಆಗ ಧ್ವನಿಯನ್ನು ಪಳಗಿಸಲು ತಾಲೀಮು ಮಾಡುತ್ತಿದ್ದೆ. ಈಗ ಪ್ರಯೋಜನಕ್ಕೆ ಬಂದಿದೆ.

◆ **ಪರಶುರಾಮದಂತಹ ಗಂಭೀರ ಪಾತ್ರಕ್ಕೆ ಸಿದ್ಧತೆ ಹೇಗೆ ಮಾಡುತ್ತೀರಿ?**

ಈ ಪಾತ್ರಕ್ಕೆ ಒಂದು ವಾರದಲ್ಲೇ ನಿರ್ಧರಿಸಬೇಕಿತ್ತು. ಇದಕ್ಕೆ ಅವಕಾಶ ಬಂದಾಗ ಮುರುಡೇಶ್ವರ ದೇವಸ್ಥಾನದಲ್ಲಿ ಇದ್ದೆ. ಆಡಿಷನ್ ಕೊಡಲು ಒಪ್ಪಿದ ನಂತರ ಮಾಡುತ್ತೇನಾ ಎನ್ನುವ ಭಯ ಕಾಡುತ್ತಿತ್ತು. ನನ್ನೊಳಗಿನ ನಟ ಸಾಧ್ಯ ಎನ್ನುವ ವಿಶ್ವಾಸವನ್ನು ತುಂಬಿದ. ಆಡಿಷನ್ ಕೊಟ್ಟ ದಿನ ಈ ಪಾತ್ರ ನನಗೆ ಆಗುತ್ತದೆ ಎಂದುಕೊಂಡೇ ಹೋಗಿದ್ದೆ. ಭಗವಂತನ ಆಶೀರ್ವಾದದಿಂದಲೇ ಸಿಕ್ಕಿದೆ ಎಂದುಕೊಂಡಿದ್ದೇನೆ. ಭಯ ಮಾತ್ರ ಕಾಡುತ್ತಿತ್ತು. ಪಾತ್ರದ ಬಗ್ಗೆ ಅಧ್ಯಯನ ಮಾಡಿದೆ. ಪರಶುರಾಮ ಪೌರಾಣಿಕ ಪರಿಕಲ್ಪನೆ. ಅದರ ಗುಣ ಹಾವಭಾವ ಹೇಗಿರುತ್ತೆ ಎನ್ನುವುದನ್ನು ತಿಳಿದುಕೊಂಡೆ. ಇಂತಹ ಪಾತ್ರವನ್ನು ಮಾಡಲು ನಟರಾದ ನಾವೂ ತುಂಬ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಪ್ರತಿ ಹಂತದಲ್ಲೂ ನಿರ್ದೇಶಕರು ಎಚ್ಚರಿಕೆಯನ್ನು ನೀಡುತ್ತಾರೆ. ಅದೆಲ್ಲ ರೂಢಿಸಿಕೊಂಡು ಒಳ್ಳೆಯ ಅಭಿನಯ ನೀಡಬೇಕು. ಈ ಪಾತ್ರ ಪ್ರತಿ ದೃಶ್ಯದಲ್ಲಿಯೂ ಕಾಡುತ್ತದೆ. ಜೀವನದಲ್ಲಿ ಅದ್ಭುತ ಅವಕಾಶ ಸಿಕ್ಕಿದೆ ಎನ್ನುವ ಸಂತೋಷವೂ ಇದೆ.

◆ **'ಗೌರಿಪುರದ ಗಯ್ಯಾಳಿಗಳು' ಕಾಮಿಡಿ ಪಾತ್ರ ಹೇಗಿತ್ತು?**

ಮೂರು ವರ್ಷ ಆ ಸೀರಿಯಲ್ ಪ್ರಸಾರವಾಯಿತು. ಆ ಪಾತ್ರದಲ್ಲಿ ಬೇರೆ ಬೇರೆ ಗೆಟಪ್‌ಗಳು ಇದ್ದವು. ನಿರ್ದೇಶಕ ರವಿತೇಜಸ್ ಕರೆದು ಅವಕಾಶ ಕೊಟ್ಟಿದ್ದರು. ಅದನ್ನು ತುಂಬ ಎಂಜಾಯ್ ಮಾಡಿದ್ದೆ. ಅದು ಕಾಮಿಡಿ ಪ್ರಧಾನವಾಗಿದ್ದರೂ ಎಲ್ಲ ಭಾವನೆಗಳನ್ನು ಬಿಂಬಿಸಬೇಕಿತ್ತು.



◆ **ಬಣ್ಣದ ಲೋಕದ ಆಕರ್ಷಣೆ ಹುಟ್ಟಿದ್ದು ಯಾವಾಗ?**

ನಟ ಆಗಬೇಕು ಎನ್ನುವುದು ಕನಸು. ಡಾಕ್ಟರ್– ಎಂಜಿನಿಯರ್ ಎಂದು ಅನೇಕರು ಹೇಳುತ್ತಿದ್ದರು. ನನಗೆ ಹಾಗೆ ಅನ್ನಿಸಲಿಲ್ಲ. ಆದರೆ ನನ್ನಾಸೆಯನ್ನು ಎಲ್ಲೂ ಪ್ರಕಟ ಮಾಡುತ್ತಿರಲಿಲ್ಲ. ಯಾರಾದರೂ ಕೇಳಿದರೆ ಬೇರೆ ಇನ್ನೇನೋ ಹೇಳುತ್ತಿದ್ದೆ. ಸ್ವಲ್ಪ ದಿನಗಳ ನಂತರ ನಟನೆ ಆಗಬೇಕು ಎನ್ನುವ ಬಯಕೆ ತೀವ್ರವಾಗಿ ಕಾಡತೊಡಗಿತು. ಮನೆಯಲ್ಲಿ ಷರತ್ತು ಹಾಕಿದಂತೆ ಡಿಗ್ರಿ ಮುಗಿದ ನಂತರ ರಂಗಭೂಮಿ, ವೆಬ್‌ಸೀರೀಸ್, ಸೀರಿಯಲ್ ಕಾರ್ಯದಲ್ಲಿ ತೊಡಗಿದೆ. ಇದಕ್ಕೆಲ್ಲ ಪ್ರೇರಣೆ ಪುನೀತ್ ರಾಜ್‌ಕುಮಾರ್. ಅದಕ್ಕೂ ಮೊದಲು ಒಂದು ಘಟನೆ ಗೊತ್ತಿಲ್ಲದಂತೆ ಪ್ರಭಾವಿಸಿದೆ. ಒಂದು ವರ್ಷದ ಮಗು ಇದ್ದಾಗ ನಟ ವಿಷ್ಣುವರ್ಧನ್ ನನ್ನನ್ನು ಎತ್ತಿ ಮುದ್ದಾಡಿದ್ದರಂತೆ. ನಮ್ಮ ಸಂಬಂಧಿಗಳ ಜೊತೆ ಅಪ್ಪ ಅವರನ್ನು ನೋಡಲು ಹೋದ ವೇಳೆ ಅದಾಗಿತ್ತು. ಆ ಗಳಿಗೆಯ ಫೋಟೊ ತೆಗೆದಿಲ್ಲ. ಆದರೆ ನಮ್ಮ ಪೋಷಕರು ಸಾವಿರಾರು ಬಾರಿ ಅದನ್ನು ಹೇಳಿದ್ದಾರೆ. ಆಗ ಕ್ಯಾಮೆರಾ ಮೊಬೈಲ್ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅನ್ನಿಸುತ್ತಿತ್ತು. ಕೆಲವೊಮ್ಮೆ ಅವರಂತೆ ಆಗಬೇಕು ಎನ್ನುವ ಬಯಕೆ ಗುಪ್ತವಾಗಿ ಹುಟ್ಟಿಕೊಂಡಿತು. ಕ್ರಮೇಣ ವಿಷ್ಣು ಅವರ ದೊಡ್ಡ ಅಭಿಮಾನಿ ಆದೆ.

◆ **ಬಿಡುವಿನ ವೇಳೆಯನ್ನು ಹೇಗೆ ಬಳಸುತ್ತೀರಿ?**

ಬಿಡುವಿನ ಸಮಯದಲ್ಲಿ ಜಿಮ್ ಮಾಡುತ್ತೇನೆ. ಶಿಸ್ತುಬದ್ಧ ಜೀವನ ಕ್ರಮವನ್ನು ರೂಢಿಸಿಕೊಂಡಿದ್ದೇನೆ. ವಾಕ್ ಮಾಡುತ್ತೇನೆ. ಎಂದೂ ಬೋರ್ ಎನ್ನುವಂತೆ ಸಮಯವನ್ನು ಕಳೆಯುವುದಿಲ್ಲ. ಏನಾದರೂ ಒಂದು ಕೆಲಸದಲ್ಲಿ ತೊಡಗಿರುತ್ತೇನೆ. ಸಿನಿಮಾ ನೋಡುವ ಅಭ್ಯಾಸ ಇದೆ. ಬೇರೆ ಬೇರೆ ಭಾಷೆಯ ಸಿನಿಮಾಗಳನ್ನೂ ಅಧ್ಯಯನ ದೃಷ್ಟಿಯಲ್ಲಿ ನೋಡುತ್ತೇನೆ. ಊಟ– ಓದು ಎಲ್ಲದರಲ್ಲೂ ಶಿಸ್ತಿನಿಂದ ಇರುವುದು ನನಗೆ ಇಷ್ಟ. ಅಭಿನಯ ರಂಗದಲ್ಲೂ ಹೊಸ ಪ್ರಯೋಗ ಮಾಡಬೇಕೆಂದಿರುವೆ. ಸಿನಿಮಾ ಒಂದಕ್ಕೆ ಮಾತುಕತೆ ನಡೀತಾ ಇದೆ. ಗಾಡ್ ಫಾದರ್ ಇಲ್ಲ. ಇನ್ನೂ ಹೆಸರು ಮಾಡಬೇಕು. ಆ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನವನ್ನು ಮಾಡುತ್ತಲೇ ಇದ್ದೇನೆ. ಸಿನಿಮಾ ಆದಷ್ಟು ಬೇಗ ಆಗಲಿ ಎಂದು ಬಯಸುವೆ. ■